## ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ರವರ ಕಛೇರಿ ನಡವಳಿಗಳು

ವಿಷಯ:- ಭದ್ರಾ ಮೇಲ್ದಂಡೆ ಯೋಜನೆಯ ತುಮಕೂರು ಶಾಖಾ ಕಾಲುವೆಯ 10.00 ಕಿ.ಮೀ ರಿಂದ 84.00 ಕಿ.ಮೀ ವರೆಗಿನ ಕಾಲುವೆ ನಿರ್ಮಾಣಕ್ಕಾಗಿ ಅರಣ್ಯಇಲಾಖೆಯ 18-77-00 ಹೆಕ್ಟೇರ್ ಜಮೀನು ಬಳಕೆ ಮಾಡಬೇಕಾಗಿರುವುದರಿಂದ ಈ ಜಮೀನಿನ ಬದಲಿಗೆ ಪರ್ಯಾಯವಾಗಿ 46-20-00 ಎಕರೆ (18-77 ಹೆಕ್ಟೇರ್ ಗಳಲ್ಲಿ) ಸರ್ಕಾರಿ ಜಮೀನನ್ನು ಅರಣ್ಯೀಕರಣಕ್ಕಾಗಿ ಅರಣ್ಯ ಇಲಾಖೆಗೆ ವರ್ಗಾವಣೆ ಮಾಡುವ ಬಗ್ಗೆ

ಉಲ್ಲೇಖ:-
1. ಕಾರ್ಯಪಾಲಕ ಇಂಜಿನಿಯರ್ ವಿ.ಜ.ನಿ.ನಿ.ಭ.ಯೋ ವಿಭಾಗ ನಂ-01 ಕಡೂರು ಇವರ ಪತ್ರ ದಿನಾಂಕ:20/07/2020.
2. ಉಪವಿಭಾಗಾಧಿಕಾರಿ, ಚಿಕ್ಕಮಗಳೂರು ಉಪವಿಭಾಗ, ಚಿಕ್ಕಮಗಳೂರು ರವರ ಪತ್ರದ ಸಂಖ್ಯೆ: ಎಲ್ ಎನ್ ಡಿ ಸಿ.ಆರ್168/2020-21 ದಿನಾಂಕ: 06/10/2020.
3. ತಹಶೀಲ್ದಾರ್, ಚಿಕ್ಕಮಗಳೂರು ತಾಲ್ಲೂಕು, ಚಿಕ್ಕಮಗಳೂರು ರವರ ಪತ್ರದ ಸಂಖ್ಯೆ: ಎಲ್ ಎನ್ ಡಿ.ಸಿ.ಆರ್71//2020-21 ದಿನಾಂಕ: 03-10-2020.

****

ಭದ್ರಾ ಮೇಲ್ದಂಡೆ ಯೋಜನೆಯ ತುಮಕೂರು ಶಾಖಾ ಕಾಲುವೆಯ **10.00** ಕಿ.ಮೀ ರಿಂದ **84.00** ಕಿ.ಮೀ ವರೆಗಿನ ಕಾಲುವೆ ನಿರ್ಮಾಣಕ್ಕಾಗಿ ಅರಣ್ಯಇಲಾಖೆಯ 18-77-00 ಹೆಕ್ಟೇರ್ ಜಮೀನು ಬಳಕೆ ಮಾಡಬೇಕಾಗಿರುವುದರಿಂದ ಉಲ್ಲೇಖ **(1)** ರ ಪತ್ರದಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಲಭ್ಯವಿರುವ ಸರ್ಕಾರಿ ಜಮೀನನ್ನು ಗುರುತಿಸಿ ಪರ್ಯಾಯ ಅರಣ್ಯೀಕರಣಕ್ಕಾಗಿ ಅರಣ್ಯ ಇಲಾಖೆಗೆ ಜಮೀನು ವರ್ಗಾಯಿಸುವಂತೆ ಕೋರಿರುತ್ತಾರೆ.

ಮೇಲ್ಕಂಡ ಕೋರಿಕೆ ಬಗ್ಗೆ ಸ್ಥಳೀಯ ಅಧಿಕಾರಿಗಳು ಪರಿಶೀಲನೆ ಮಾಡಿ ಭದ್ರಾ ಮೇಲ್ದಂಡೆ ಯೋಜನೆಯ ತುಮಕೂರು ಶಾಖಾ ಕಾಲುವೆಯ **10.00** ಕಿ.ಮೀ ರಿಂದ **84.00** ಕಿ.ಮೀ ವರೆಗಿನ ಕಾಲುವೆ ನಿರ್ಮಾಣಕ್ಕಾಗಿ ಅರಣ್ಯಇಲಾಖೆಯ 18-77-00 ಹೆಕ್ಟೇರ್ ಜಮೀನು ಬಳಕೆ ಮಾಡಬೇಕಾಗಿರುವುದರಿಂದ ಈ ಜಮೀನಿನ ಬದಲಿಗೆ ಪರ್ಯಾಯವಾಗಿ ಚಿಕ್ಕಮಗಳೂರು ತಾಲ್ಲೂಕು ಜಾಗರ ಹೋಬಳಿ ಇನಾಂ ದತ್ತಾತ್ರೇಯ ಪೀಠ ಗ್ರಾಮದ ಸ.ನಂ.,**289** ರಲ್ಲಿ ಒಟ್ಟು **46-20-00** ಎಕರೆ(**18-77** ಹೆಕ್ಟೇರ್ ) ಜಮೀನು ಗುರುತಿಸಿಕೊಂಡು ಅರಣ್ಯ ಇಲಾಖೆಗೆ ಪರ್ಯಾಯ ಅರಣ್ಯೀಕರಣಕ್ಕಾಗಿ ವರ್ಗಾಯಿಸುವ ಬಗ್ಗೆ, ಹೋಬಳಿ ಭೂಮಾಪಕರು, ರಾಜಸ್ವ ನಿರೀಕ್ಷಕರು, ಉಪತಹಸೀಲ್ದಾರ್, ಗ್ರಾಮಲೆಕ್ಕಾಧಿಕಾರಿ ಮತ್ತು ಅರಣ್ಯಇಲಾಖೆಯ ಸಿಬ್ಬಂದಿಯವರೊಂದಿಗೆ ಜಂಟಿಯಾಗಿ ಸ್ಥಳಪರಿಶೀಲಿಸಿ ಸರ್ವೆ ಕಾರ್ಯ ನಡೆಸಿ, ಅದರಂತೆ ಪ್ರಸ್ತಾಪಿತ ಸ.ನಂ.**289** ರಲ್ಲಿ ಚಾಲ್ತಿ ಆರ್.ಟಿ.ಸಿ. ಯಂತೆ ಒಟ್ಟು **76-11-00** ಎಕರೆ ಸರ್ಕಾರಿ ಕಾಫಿ ಬಂಜರು ಜಮೀನಿರುತ್ತದೆ. ಇನಾಂ ದತ್ತಾತ್ರೇಯ ಪೀಠ ಗ್ರಾಮದಲ್ಲಿ ಒಟ್ಟು **580** ಜಾನುವಾರುಗಳಿದ್ದು, ಗ್ರಾಮದಲ್ಲಿ **4835-33** ಎಕರೆ ಗೋಮಾಳ ಜಮೀನಿರುತ್ತದೆ. ಪ್ರಸ್ತಾಪಿತ ಸ.ನಂ.**289** ರ **46-20-00** ಎಕರೆ ಪ್ರದೇಶಕ್ಕೆ ಸಂಬಂಧಿಸಿದಂತೆ ನಮೂನೆ **50,53** ಮತ್ತು ಹಾಗೂ **94(ಸಿ)** ರಲ್ಲಿ ಯಾವುದೇ ಅರ್ಜಿಗಳು ಮಂಜೂರಿಗೆ ಬಾಕಿ ಇರುವುದಿಲ್ಲ. ಆದರೆ ನಮೂನೆ **57** ರ ಒಟ್ಟು **03** ಅರ್ಜಿಗಳು ಬಾಕಿ ಇರುತ್ತವೆ ಹಾಗೂ ಪ್ರಸ್ತಾಪಿತ ಪ್ರದೇಶಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಯಾವುದೇ ರೀತಿಯ ಮೊಕದ್ದಮೆ ದಾಖಲಾಗಿರುವುದು ಕಂಡುಬಂದಿರುವುದಿಲ್ಲ. ಸದರಿ ಉದ್ದೇಶಕ್ಕೆ ಹೊರತುಪಡಿಸಿ ಬೇರೆ ಉದ್ದೇಶಕ್ಕೆ ಜಾಗ ಕಾಯ್ದಿರಿಸುವ ಬಗ್ಗೆ ಯಾವುದೇ ಕಡತ ಪ್ರಸ್ತಾವನೆ ಇರುವುದಿಲ್ಲ, ಆದ್ದರಿಂದ ಭದ್ರಾ ಮೇಲ್ದಂಡೆ ಯೋಜನೆಯ ತುಮಕೂರು ಶಾಖಾ ಕಾಲುವೆಯ **10.00** ಕಿ.ಮೀ ರಿಂದ **84.00** ಕಿ.ಮೀ ವರೆಗಿನ ಕಾಲುವೆ ನಿರ್ಮಾಣಕ್ಕಾಗಿ ಅರಣ್ಯಇಲಾಖೆಯ 18-77-00 ಹೆಕ್ಟೇರ್ ಜಮೀನು ಬಳಕೆ ಮಾಡಬೇಕಾಗಿರುವುದರಿಂದ ಬದಲಿಗೆ ಪರ್ಯಾಯವಾಗಿ ಚಿಕ್ಕಮಗಳೂರು ತಾಲ್ಲೂಕು ಜಾಗರ ಹೋಬಳಿ ಇನಾಂ ದತ್ತಾತ್ರೇಯ ಪೀಠದ ಸ.ನಂ.**289** ರಲ್ಲಿ **46-20-00** ಎಕರೆ(**18-77** ಹೆಕ್ಟೇರ್ ) ಸರ್ಕಾರಿ ಜಮೀನನ್ನು ಅರಣ್ಯೀಕರಣಕ್ಕಾಗಿ ಅರಣ್ಯ ಇಲಾಖೆಗೆ ವರ್ಗಾವಣೆ ಮಾಡುವ ಬಗ್ಗೆ ಉಲ್ಲೇಖ **(1)** ಮತ್ತು **(2)** ರಲ್ಲಿ ಉಪವಿಭಾಗಾಧಿಕಾರಿ, ಚಿಕ್ಕಮಗಳೂರು ಹಾಗೂ ತಹಶೀಲ್ದಾರ್, ಚಿಕ್ಕಮಗಳೂರು ಇವರು ಶೀಫಾರಸ್ ಮಾಡಿ ಪ್ರಸ್ತಾವನೆ ಸಲ್ಲಿಸಿರುವಂತೆ ಈ ಕೆಳಕಂಡಂತೆ ಆದೇಶ ನೀಡಿದೆ.

**ಆದೇಶದ ಸಂಖ್ಯೆ:ಎ04 ಎಲ್ ಎನ್ ಡಿ ಸಿಆರ್: 98/2020-21 ದಿನಾಂಕ: 23 /10 /2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಸ್ಥಳೀಯ ಅಧಿಕಾರಿಗಳು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಕೋಷ್ಟಕದಲ್ಲಿ ವಿವರಿಸಿದಂತೆ ಭದ್ರಾ ಮೇಲ್ದಂಡೆ ಯೋಜನೆಯ ತುಮಕೂರು ಶಾಖಾ ಕಾಲುವೆಯ **10.00** ಕಿ.ಮೀ ರಿಂದ **84.00** ಕಿ.ಮೀ ವರೆಗಿನ ಕಾಲುವೆ ನಿರ್ಮಾಣಕ್ಕಾಗಿ ಅರಣ್ಯಇಲಾಖೆಯ 18-77-00 ಹೆಕ್ಟೇರ್ ಜಮೀನು ಬಳಕೆ ಮಾಡಬೇಕಾಗಿರುವುದರಿಂದ ಬದಲಿಗೆ ಪರ್ಯಾಯವಾಗಿ ಚಿಕ್ಕಮಗಳೂರು ತಾಲ್ಲೂಕು ಜಾಗರ ಹೋಬಳಿ ಇನಾಂ

**ದತ್ತಾತ್ರೇಯ ಪೀಠದ ಸ.ನಂ.289 ರಲ್ಲಿ 46-20-00 ಎಕರೆ (18-77 ಹೆಕ್ಟೇರ್ )** ಸರ್ಕಾರಿ ಜಮೀನನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 71 ರಡಿ **ಪರ್ಯಾಯವಾಗಿ ಅರಣ್ಯೀಕರಣಕ್ಕಾಗಿ ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಿ ಕಾಯ್ದಿರಿಸಿದೆ.**

**ಕೋಷ್ಟಕ**

| ಅರಣ್ಯ ಜಮೀನು ಭೂ ಸ್ವಾಧೀನವಾಗುತ್ತಿರುವ ಜಮೀನಿನ ವಿವರ | | | | ಪರ್ಯಾಯವಾಗಿ ಅರಣ್ಯೀಕರಣಕ್ಕಾಗಿ ಅರಣ್ಯ ಇಲಾಖೆಗೆ ವರ್ಗಾವಣೆ ಮಾಡಿ ಕಾಯ್ದಿರಿಸುವ ಜಮೀನಿನ ವಿವರ | | | |
|---|---|---|---|---|---|---|---|
| ತಾಲ್ಲೂಕು | ಗ್ರಾಮ | ಸ. ನಂ | ವಿಸ್ತೀರ್ಣ (ಹೆಕ್ಟೇರ್) | ತಾಲ್ಲೂಕು | ಗ್ರಾಮ | ಸ.ನಂ | ವಿಸ್ತೀರ್ಣ |
| ತರೀಕೆರೆ | ಗಡುಗದಹಳ್ಳಿ | 20 | 02.00-00 | ಚಿಕ್ಕಮಗಳೂರು | ಇನಾಂ ದತ್ತಾತ್ರೇಯ ಪೀಠದ | 289 | **46-20-00 ಎಕರೆ (18-77 ಹೆಕ್ಟೇರ್ )** |
| ಕಡೂರು | ಆರೇಹಳ್ಳಿ | 02 | 02-93-00 | | | | |
| | ಬಸಲೇರಿ | 11 | 02-30-00 | | | | |
| | ಗೌಡನಕಟ್ಟೇಹಳ್ಳಿ | 42 | 02-26-00 | | | | |
| | ಉಡುಗೆರೆ ಮೀಸಲು ಅರಣ್ಯ | 117 ಮತ್ತು 118 | 09-28-00 | | | | |
| | ಒಟ್ಟು | | 18-77-00 | | ಒಟ್ಟು | | **46-20-00** |

**ಷರತ್ತುಗಳು:**

1. **ವರ್ಗಾವಣೆ ಮಾಡಿ ಕಾಯ್ದಿರಿಸಿದ** ಜಮೀನು ಅರಣ್ಯ **ಇಲಾಖೆಗೆ** ಅಗತ್ಯವಿಲ್ಲದಿರುವಾಗ **ಮರಳಿ** ಕಂದಾಯ **ಇಲಾಖೆಗೆ ಹಿಂಪಡೆಯಲಾಗುವುದು.**
2. ವರ್ಗಾವಣೆಯಾದ ಜಮೀನನ್ನು ಅರಣ್ಯೀಕರಣಕ್ಕಾಗಿ ಮಾತ್ರ ಉಪಯೋಗಿಸತಕ್ಕದ್ದು
3. **ಪ್ರಸ್ತಾಪಿತ ಜಮೀನಿನ ವರ್ಗಾಣೆಯು ಮೇಲ್ಕಂಡ ಷರತ್ತುಗಳ ಹಾಗೂ ಅನ್ವಯವಾಗುವ ಇತರೆ ಕಾಯಿದೆ ಹಾಗೂ ನಿಯಮಗಳಡಿ ಎಲ್ಲಾ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.**

ಜಿಲ್ಲಾಧಿಕಾರಿ,
ಚಿಕ್ಕಮಗಳೂರು ಜಿಲ್ಲೆ,
ಚಿಕ್ಕಮಗಳೂರು.

ಪ್ರತಿಯನ್ನು ಈ ಕೆಳಕಂಡವರಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ ರವಾನಿಸಿದೆ.

1. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಚಿಕ್ಕಮಗಳೂರು
2. ಉಪವಿಭಾಗಾಧಿಕಾರಿ, ಚಿಕ್ಕಮಗಳೂರು ಉಪವಿಭಾಗ, ಚಿಕ್ಕಮಗಳೂರು ರವರ ಮಾಹಿತಿಗಾಗಿ ಕಳುಹಿಸಿದೆ.
3. ತಹಸೀಲ್ದಾರ್ ಚಿಕ್ಕಮಗಳೂರು ತಾಲ್ಲೂಕು, ಚಿಕ್ಕಮಗಳೂರು ರವರಿಗೆ ಆದೇಶದ ಪ್ರತಿ ಹಾಗೂ ಸಂಬಂಧಪಟ್ಟ ಮೂಲ ಕಡತದೊಂದಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
4. **ಕಾರ್ಯಪಾಲಕ ಇಂಜಿನಿಯರ್ ಭದ್ರ ಮೇಲ್ದಂಡ ಯೋಜನೆ ವಿಭಾಗ** ನಂ-01 **ಕಡೂರು** ರವರಿಗೆ ಮಾಹಿತಿಗಾಗಿ ಕಳುಹಿಸಿದೆ